ಶಾಲಾ ಶಿಕ್ಷಣ ಇಲಾಖೆ

# ಕರ್ನಾಟಕ ಪಬ್ಲಿಕ್ ಶಾಲೆ ತೆರ್ನಮಕ್ಕಿ

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

## ಭಟ್ಕಳ ತಾಲೂಕು ಉತ್ತರ ಕನ್ನಡ ಜಿಲ್ಲೆ –581421



# ಪ್ರಥಮ ಭಾಷೆ ಕನ್ನಡ

## ಎಸ್.ಎಸ್.ಎಲ್.ಸಿ

## ರಾಜ್ಯ ಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆ

## ಮಾದರಿ ಉತ್ತರ ಸೂಚಿ ೨೩–೨೪

**ಗುಡ್ಡಪ್ಪ.ಎಂ.ಎಚ್**
ಕನ್ನಡ ಭಾಷಾ ಶಿಕ್ಷಕರು
ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ, ಭಟ್ಕಳ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6x1=6**

**1. 'ಸೊಗಸಾಗಿ' ಪದವು ಈ ಅವ್ಯಯಕ್ಕೆ ಸೇರಿ ಸೇರಿದೆ**

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ

(ಸಿ) ಕ್ರಿಯಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ

**2. ದ್ವಿತೀಯಾ ವಿಭಕ್ತಿಯ ಕಾರಕಾರ್ಥ;**

ಎ) ಅಧಿಕರಣ (ಬಿ) ಕರಣಾರ್ಥ

(ಸಿ) ಕರ್ಮಾರ್ಥ (ಡಿ) ಸಂಬಂಧ

**3. 'ವನೌಷಧಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ಜಶ್ತ್ವ ಸಂಧಿ (ಡಿ) ವೃದ್ಧಿ ಸಂಧಿ

**4. 'ನೆಯ್ದುವಸ್ತ್ರ' ಪದವು ಈ ಸಮಾಸಕ್ಕೆ ಸೇರಿದೆ.**

(ಎ) ಅಂಶಿ ಸಮಾಸ (ಬಿ) ಕ್ರಿಯಾ ಸಮಾಸ

(ಸಿ) ಗಮಕ ಸಮಾಸ (ಡಿ) ತತ್ಪುರುಷ ಸಮಾಸ

**5. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**

(ಎ) ಮಿಶ್ರವಾಕ್ಯ (ಬಿ) ಸಾಮಾನ್ಯವಾಕ್ಯ

(ಸಿ) ಸ್ವತಂತ್ರ ವಾಕ್ಯ (ಡಿ) ಸಂಯೋಜಿತ ವಾಕ್ಯ

**6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು**

(ಎ) ವಾಕ್ಯವೇಷ್ಟನ ಚಿಹ್ನೆ (ಸಿ) ಆವರಣ ಚಿಹ್ನೆ

(ಬಿ) ಉದ್ಧರಣ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿ ರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4x1=4**

7. ಕಳುವ್ಯಾರೆ : ಕಳುಹಿಸಿದ್ದಾರೆ :: ಸಕ್ಕಾರಿ : ಸಕ್ಕರೆ

8. ಆರ್ಕ : ಎಕ್ಕ : ಕುಠಾರ : ಕೊಡಲಿ

9. ಹಾಡಲಿ : ವಿಧ್ಯರ್ಥಕ :: ಹಾಡನು : ನಿಷೇದಾರ್ಥಕ

10. ಕೆನೆಮೊಸರು : ಜೋಡುನುಡಿ :: ಮೊಟ್ಟಮೊದಲು : ದ್ವಿರುಕ್ತಿ

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7x1=7**

**11. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?**

❖ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರು – ಟ್ರಾಫಲ್ಗಾರ್ ಸ್ಕ್ವೇರ್.[ Trafalgar Square]

**12. ಉಪದೇಶ ಯಾರ ಕಿವಿಗೆ ನಾಟುವುದಿಲ್ಲ?**

❖ ರಾಜ ಮನೆತನದಲ್ಲಿ ಹುಟ್ಟಿ, ಅಹಂಕಾರದಿಂದ ಕೂಡಿದವರ ಕಿವಿಗೆ ಉಪದೇಶ ನಾಟುವುದಿಲ್ಲ.

**13. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?**

❖ ನೈಮಿತ್ತಿಕನು ಸುಕುಮಾರಸ್ವಾಮಿಯ ಕುರಿತು "ಎಂದು ಈತನು ಋಷಿಗಳನ್ನು ನೋಡುತ್ತಾನೋ ಅಂದು ತಪಸ್ಸಿಗೆ ಹೋಗುತ್ತಾನೆ" ಎಂದು ಹೇಳಿದನು.

**14. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**

❖ ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಔಷಧ ಮತ್ತು ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**15. ಕವಿ ಕುವೆಂಪು ಅವರು ನೋಡಿದ ಅಡಕೆಯ ತೋಟ ಎಲ್ಲಿದೆ?**

❖ ಕವಿಯು ಕುವೆಂಪು ಅವರು ಅಡಕೆಯ ತೋಟ ವನದಂಚಿನಲ್ಲಿದೆ.

**16. ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು ?**

❖ ದ್ರೋಣನು ಪರಶುರಾಮರ ಬಳಿಗೆ ದ್ರವ್ಯವನ್ನು ಬೇಡುವುದಕ್ಕಾಗಿ ಬಂದನು.

**17. ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?**

❖ ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರು– ದ್ರಾವಿಡ ಕಳಗಂ.

---

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10x2=20**

**18. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**

❖ ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.

---

**19. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

❖ ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

---

**20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

❖ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರು, **1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ** ಮುಂತಾದ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳನ್ನಾಗಿ ಮಾಡಿದರು.

---

**21. ಅರಸ ವೃಷಭಾಂಕನು ಯಶೋಭದ್ರೆಯ ಮನೆಗೆ ಬರಲು ಕಾರಣವೇನು?**

❖ ಒಮ್ಮೆ ಒಬ್ಬ ವರ್ತಕನು ಲಕ್ಷ ದಿನಾರಗಳ ಬೆಲೆಬಾಳುವ ರತ್ನಗಂಬಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದುಕೊಂಡು ಬಂದಿದ್ದಾಗ ಆ ಪಟ್ಟಣವನ್ನಾಳುವ ವೃಷಭಾಂಕನೆಂಬ ರಾಜ ಮತ್ತು ಮಹಾರಾಣಿ ಅವುಗಳ ಬೆಲೆ ಹೆಚ್ಚಾಯಿತೆಂದು ಕ್ರಯಕ್ಕೆ ಕೊಳ್ಳಲಿಲ್ಲ.ಆದರೆ ಸುಕುಮಾರ ಸ್ವಾಮಿಯ ತಾಯಿ ಅಷ್ಟೂ ಬೆಲೆ ಕೊಟ್ಟು ಖರೀದಿಸಿ ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ಸೊಸೆಯಂದಿರಿಗೆ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು.ಈ ಸಂಗತಿಯನ್ನು ತಿಳಿದು ರಾಜನು ಆಶ್ಚರ್ಯಪಟ್ಟು ಅವರ ಐಶ್ವರ್ಯವನ್ನು ನೋಡಲು ವೃಷಭಾಂಕನು ಯಶೋಭದ್ರೆಯ ಮನೆಗೆ ಬಂದನು.

22. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

❖ "ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ–ಭೀಮರು ಬದುಕಿರುವವರೆಗೆ ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಲ್ಲುವೆನು.ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ.ಎಂಬುದು ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ.

---

23. ಪರಶುರಾಮನು ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?

❖ ಪರಶುರಾಮನು ಬೇಡಿದವರಿಗೆ ಒಡವೆಯನ್ನು, ಅವನೀತಳವನ್ನು ಗುರುವಿಗೆ ದಾನಮಾಡಿದ್ದರಿಂದ ಆತನ ಬಳಿ ಬಿಲ್ಲು –ಬಾಣಗಳಲ್ಲದೆ ಬೇರೇನೂ ಇರಲಿಲ್ಲ. ಆ ಸಂದರ್ಭದಲ್ಲಿ ದ್ರೋಣನು ಅಶ್ವತ್ಥಾಮನ ಜೊತೆಯಲ್ಲಿ ಏನಾದರೂ ದ್ರವ್ಯ ಬೇಡಲೆಂದು ಪರಶುರಾಮನ ಬಳಿಗೆ ಬಂದನು. ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

---

24. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?

❖ ಗಾಂಧೀಜಿಯವರು ವಿದ್ಯಾಭ್ಯಾಸದ ಕಾಲದಲ್ಲಿ ಪಠ್ಯಪುಸ್ತಕಗಳ ಹೊರತು ಮತ್ತೇನನ್ನೂ ಓದಲಿಲ್ಲವೆಂದು ಹೇಳಬಹುದು. ಅವರ ಓದಿದ ಕೆಲವೇ ಪುಸ್ತಕಗಳ ಪೈಕಿ, ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು ರಸ್ಕಿನ್‌ನ ಅವರ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ನನ್ನ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ಅವರು ನಿರ್ಣಯಿಸಿಕೊಂಡರು. ಅವರು ಓದಿದ ಕೆಲವು ಪುಸ್ತಕಗಳ ಪೈಕಿ, ಅನಂತರ ಅವರು ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ (ಭಾಷೆ)ಗೆ ಅನುವಾದ ಮಾಡಿದರು.

---

25. ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಲು ಕಾರಣವೇನು?

❖ ಎಲ್ಲ ಮಕ್ಕಳೂ ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು. ಆದರೆ, ಹನ್ನೆರಡು ವರ್ಷದ ಬಾಲಕ ಭಗತ್‌ಸಿಂಗ್ ಮಾತ್ರ ಮನೆಗೆ ಬಂದಿರಲಿಲ್ಲ. ಅವನ ತಂದೆ ತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಯಿತು. ಸಂಜೆ ತಡವಾಗಿ ಬಾಲಕ ಮನೆಯೊಳಕ್ಕೆ ಕಾಲಿಟ್ಟ. ಅವನ ತಂಗಿ ಕೂಗಿಕೊಂಡಳು, "ವೀರಾಜಿ ಬಂದ.... ವೀರಾಜಿ ಬಂದ...." ಅವನಮ್ಮ ಓಡಿ ಬಂದು ಬಾಲಕನನ್ನು ಬಿಗಿಯಾಗಿ ಅಪ್ಪಿದಳು. ಹೀಗೆ ಮಗನನ್ನು ತಾಯಿಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತ್ತು.

---

26. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

❖ ಒಡೆಯನ ಅಂಗಳದಲ್ಲಿ ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು, ಕಡಲುಕ್ಕಿ ಹರಿಯುವಂತಹ ಸಂಭ್ರಮ ಇಳೆಗೆ ಹೀಗೆ **ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.**

---


27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?

❖ ನಮ್ಮ ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಗಿಡವಿದೆ. ಬೂದು ಬಣ್ಣದ ಗಿಡದ ಎಳೆ ಚಿಗುರು ಪೂಜಾರತಿಗೆ ಬಳಕೆ! ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ದೀಪಾವಳಿ, ಕಾರ್ತೀಕಮಾಸದಲ್ಲಿ ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಒಂದೆರಡು ಜವಾರಿ ಹತ್ತಿ ಗಿಡಗಳಿರುತ್ತಿದ್ದವು. ಈ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಹೀಗೆ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು.

---

**V ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

**28. ವಿ. ಕೃ. ಗೋಕಾಕ್**



ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ ಅವರು ಸಾ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ವಿ.ಕೃ.ಗೋಕಾಕ ಅವರು **ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ** ಮೊದಲಾದ ಕೃತಿಗಳ ಕರ್ತೃ.

ಇವರ **ದ್ಯಾವಾ ಪೃಥಿವೀ** ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**, **ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿ** ಹಾಗೂ ಭಾರತ ಸರ್ಕಾರ **ಪದ್ಮಶ್ರೀ ಪುರಸ್ಕಾರ** ನೀಡಿ ಗೌರವಿಸಿದೆ. ಅಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಲಭಿಸಿವೆ.

**29. ಕುವೆಂಪು.**

ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಸಾ.ಶ.1904 ಡಿಸೆಂಬರ್ 29ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಆಧುನಿಕ ಕನ್ನಡ ಸಾಹಿತ್ಯದ ಕವಿಗಳಲ್ಲಿ ಅಗ್ರಗಣ್ಯರಾದ ಕುವೆಂಪು ಅವರು **ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ** ,ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ತಪೋನಂದನ, ರಸೋವೈಸ: ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್ – ನೆನಪಿನ ದೋಣಿಯಲ್ಲಿ(ಆತ್ಮಕಥನ) ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ**ಗಳು ಲಭಿಸಿವೆ.

---

## VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3

30. **ಕದಡಿದ ಸಲಿಲಂ ತಿಳಿವಂ**
**ದದೆ ತನ್ನಿಂ ತಾನೆ ತಿಳಿದ ದಶವದನಂಗಾ**

| 4 | 4 | 4 |
|---|---|---|
| UUUU | U U _ | UU _ |
| ಕದಡಿದ | ಸಲಿಲಂ | ತಿಳಿವಂ |

| 4 | 4 | 4 | 4 | 4 |
|---|---|---|---|---|
| U U _ | _ _ | U U UU | _U U | _ _ |
| ದದೆ ತ | ನ್ನಿಂ ತಾ | ನೆ ತಿಳಿದ | ದಶವ | ದನಂಗಾ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

---

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1x3=3

**31. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

- **ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.**
- **ಲಕ್ಷಣ** : ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ **'ಅರ್ಥಾಂತರನ್ಯಾಸ ಅಲಂಕಾರ.'**
- **ಉಪಮೇಯ** (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.
- **ಉಪಮಾನ** ( ಸಾಮಾನ್ಯ ವಾಕ್ಯ) : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

- **ಸಮನ್ವಯ :** ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ ."ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?"ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು ಅರ್ಥಾಂತರನ್ಯಾಲಂಕಾರ.

---

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

**32. ದೇಶ ಸುತ್ತಿ ನೋಡು; ಕೋಶ ಓದಿ ನೋಡು.**

**ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು** ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ'** ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **ದೇಶ ಸುತ್ತಿ ನೋಡು; ಕೋಶ ಓದಿ ನೋಡು** ಎಂಬ ಗಾದೆಯೂ ಒಂದಾಗಿದೆ.

ಮನುಷ್ಯನಿಗೆ ಲೋಕಜ್ಞಾನ ಬಹಳ ಮುಖ್ಯ. ಮನುಷ್ಯ ತನ್ನ ಅನುಭವಗಳನ್ನು ಹೆಚ್ಚಿಸಿಕೊಳ್ಳ ಬೇಕಾದರೆ ಬೇರೆ ಬೇರೆ ಊರುಗಳಿಗೆ ಹೋಗಬೇಕಾಗುತ್ತದೆ. ಅಂದರೆ ಒಂದು ದೇಶ ಸುತ್ತುವುದರಿಂದ ಆ ಪ್ರದೇಶದ ಜನರ ಆಚಾರ, ವಿಚಾರ, ಪದ್ಧತಿ, ರೀತಿ, ನೀತಿಗಳ ಅರಿವಾಗುತ್ತದೆ. ನಮಗೆ ತಿಳಿಯದೇ ಇರುವ ಎಷ್ಟೋ ವಿಷಯಗಳು ತಿಳಿಯುತ್ತವೆ. ಲೋಕಸುತ್ತುವುದೇ ಒಂದು ಬಗೆಯ ಜ್ಞಾನಾರ್ಜನೆ ಎನಿಸಿದೆ. ಅದರಂತೆ ಕೋಶ ಓದುವುದು ಎಂದರೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅಧ್ಯಯನ ಮಾಡುವುದು, ಇಡೀ ಪ್ರಪಂಚದ ಜ್ಞಾನ ಪುಸ್ತಕಗಳಲ್ಲಿ ಅಡಗಿದೆ. ಹೀಗೆ ಅಡಕವಾಗಿರುವ ವಿಷಯಗಳನ್ನು ಓದಿ ಅದನ್ನು ಜೀವನದಲ್ಲಿ ಅನ್ವಯ ಮಾಡಿಕೊಂಡರೆ ನಮ್ಮ ಬದುಕು ಹಸನಾಗುತ್ತದೆ. ಇವೆರಡರ ಉದ್ದೇಶವು ಅಂತಿಮವಾಗಿ ಅನುಭವಜ್ಞಾನ ಗಳಿಸುವುದಾಗಿದೆ.

**ಅಥವಾ**

- **'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ?'.**

**ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು** ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ***'ಗಾದೆಗಳನ್ನು ವೇದಗಳಿಗೆ ಸಮಾನ'*** ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?'** ಎಂಬ ಗಾದೆಯೂ ಒಂದಾಗಿದೆ.

ಮೂರು ವರುಷಗಳಲ್ಲಿ ಕಲಿತದ್ದು ನೂರು ವರ್ಷಗಳವರೆಗೆ, ಕೂಸಾಗಿ ಕಲಿತದ್ದು ಲೇಸಾಗಿ ವರ್ಧಿಪುದು ಎಂಬಂತೆ ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಗ್ರಹಣಶಕ್ತಿ, ಚುರುಕುತನ ಮೊದಲಾದ ಗುಣಗಳು ಸಹಜವಾಗಿರುತ್ತದೆ. ಅವರಿಗೆ ಚಿಕ್ಕಂದಿನಲ್ಲಿಯೇ ಉತ್ತಮ ಗುಣಗಳನ್ನು ಒಳ್ಳೆಯ ನೀತಿ ನಡವಳಿಕೆಗಳನ್ನು ಕಲಿಸಿದರೆ ಆ ಮಕ್ಕಳು ಚೆನ್ನಾಗಿ ಕಲಿತು, ಉತ್ತಮ ನಾಗರಿಕರಾಗಿ ಬೆಳೆಯುತ್ತಾರೆ. ಹಾಗೆ ಚಿಕ್ಕಂದಿನಲ್ಲಿ ಒಳ್ಳೆಯ ವಿದ್ಯೆ ನಡತೆಗಳನ್ನು ಕಲಿಸದೆ, ಮಕ್ಕಳು ಕೆಟ್ಟದನ್ನ ಮಾಡಿದರೂ , ಚಿಕ್ಕ ಮಕ್ಕಳೆಂದು ಸುಮ್ಮನೆ ಬಿಟ್ಟು ಅವರನ್ನೇ ಹೊಗಳಿ ಬೆಳೆಸಿದರೆ ದೊಡ್ಡವರಾದ ಮೇಲೂ, ಅವರು ಅದೇ ಗುಣಗಳನ್ನು ಪಾಲಿಸುತ್ತಾರೆ. ಆಗ ನಾವು ಹೇಳಿಕೊಟ್ಟ ಬುದ್ಧಿಮಾತುಗಳು, ವಿದ್ಯೆ ಎಲ್ಲಾ ಶಾಶ್ವತವಾಗಿ ಅವರ ಮನಸ್ಸಿನಲ್ಲಿ ಉಳಿಯುತ್ತದೆ. ಆದ್ದರಿಂದ ಮಕ್ಕಳನ್ನು ಚಿಕ್ಕವಯಸ್ಸಿನಲ್ಲಿಯೇ ಒಳ್ಳೆಯ ಮಾರ್ಗದಲ್ಲಿ ತಿದ್ದಿ ಬೆಳೆಸಬೇಕು. ಯಾವುದೇ ಪ್ರಾಣಿ ಅಥವಾ ಸಸ್ಯವನ್ನು ಅದು ಚಿಕ್ಕದಿರುವಾಗಲೇ ಬೇಕಾದಂತೆ ಬೇಕಾದ ಹಾಗೆ ಅದನ್ನು ರೂಪಿಸಬಹುದು. ಗಿಡ ಚಿಕ್ಕದಿರುವಾಗ ಎಳೆಯ ಬಳ್ಳಿ ಹೇಗೆಂದರೆ ಹಾಗೇ ಬಾಗುತ್ತದೆ. ಆದರೆ ಬಲಿತ ಮೇಲೆ ಬಾಗಿಸಿದರೆ ಮುರಿಯುತ್ತದೆ. ಹಾಗೆಯೇ ಪ್ರಾಣಿ ಅಥವಾ ಮನುಷ್ಯರು ಚಿಕ್ಕದಿರುವಾಗಲೇ ನಡೆಯೆಯನ್ನು ತಿದ್ದಬಹುದು. ನಮಗೆ ಬೇಕಾದಂತೆ ರೂಪಿಸಕೊಳ್ಳಬಹುದು. ಹಾಗಾಗಿಯೇ ಮಗುವಿನ ಬಾಲ್ಯದಲ್ಲಿಯೇ ವಿದ್ಯೆಯನ್ನು ಕಲಿಸಬೇಕೆಂದು ಸರ್ವಜ್ಞನು ಹೇಳಿದ್ದಾನೆ. ಆದ್ದರಿಂದ ಚಿಕ್ಕದಿರುವಾಗಲೇ ಮಾನವ ತನ್ನಲ್ಲಿ ಸಜ್ಜನ ನಡತೆಯನ್ನು ಬೆಳೆಸಿಕೊಳ್ಳಬೇಕೆಂದು ಈ ಗಾದೆ ಸೂಚಿಸುತ್ತದೆ.

---

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

**33. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು"**

**ಆಯ್ಕೆ:** ಈ ವಾಕ್ಯವನ್ನು **ಡಾ. ಬನ್ನಂಜೆ ಗೋವಿಂದಾಚಾರ್ಯರ** ಅನುವಾದಿತ **'ಕಾದಂಬರಿ'** ಕೃತಿಯಿಂದ ಆರಿಸಿರುವ **'ಶುಕನಾಸನ ಉಪದೇಶ'** ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಗುರುವಾಣಿ ಎಷ್ಟೇ ಪರಿಶುದ್ಧವಾದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ಸಜ್ಜನರಿಗೆ ಅದು ಕಿವಿಗೆ ಆಭರಣ. ಜನರ ಒಳಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಮೀಹ ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು ಎಂದು **ಶುಕನಾಸನು ಚಂದ್ರಾಪೀಡನಿಗೆ** ಉಪದೇಶಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಗುರೂಪದೇಶದಿಂದ ಬಾಳಿನಲ್ಲಿ ಒಂದು **ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ** ಎಂದು ಗುರೂಪದೇಶದ ಮಹತ್ವವನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ..

---

**34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"**

**ಆಯ್ಕೆ :-** ಈ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬ ಪ್ರವಾಸ ಕಥನದಿಂದ ಆಯ್ದ "ಭಾಗ್ಯಶಿಲ್ಪಿಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :-** ಪಂಡಿತ ಜವಾಹರ್‌ಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯನವರ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಅವರ ವ್ಯಕ್ತಿತ್ವವನ್ನು ಬಣ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ

**ಸ್ವಾರಸ್ಯ :-** ವಿಶ್ವೇಶ್ವರಯ್ಯ ಅವರ ವಾಸ್ತವ ಚಿಂತನೆ, ನಿಸ್ವಾರ್ಥಸೇವೆ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಕೂಡಿದ ವ್ಯಕ್ತಿತ್ವನ್ನು ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

---

**35. "ಯಾರದು, ಒಳಗೆ? ಬಾಗಿಲು ತೆಗೆಯಿರಿ"**

**ಆಯ್ಕೆ :-** ಈ ವಾಕ್ಯವನ್ನು 'ಸಾರಾ ಅಬೂಬಕ್ಕರ್' ಅವರು ರಚಿಸಿರುವ 'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:-** ಮುದುಕಿಯ ಸೊಸೆಗೆ ಹೆರಿಗೆಯನ್ನು ಮಾಡಿಸಿ ಅವಳ ಸೊಸೆಯನ್ನು ಉಳಿಸಿ ನಂತರ ತನ್ನ ಕಾಲಿಗೆ ಆದ ಗಾಯಕ್ಕೆ ಆರೈಕೆಮಾಡಿಕೊಂಡು ವಿಶ್ರಾಂತಿಗಾಗಿ ಮಲಗಲು ಜಾಗ ಕೇಳುವಾಗ ಆ ಮುದುಕಿಗೆ ಆತನ ಬಗ್ಗೆ ಸಂಶಯ ಮೂಡುವಾಗಲೇ ಹೊರಗಡೆ ಸೈನಿಕರು ಬಾಗಿಲು ತೆಗೆಯಲು ಬಡೆಯುತ್ತಾ ಈ ಮೇಲಿನಂತೆ ಹೇಳುತ್ತಾರೆ..

**ಸ್ವಾರಸ್ಯ :-** ಮುದುಕಿಯು ರಾಹಿನನ್ನು ನೋಡುತ್ತಾ, "ಯಾರೀತ? ತಮ್ಮವನೇ ಅಥವಾ ವೈರಿ ದೇಶದವನೇ?" ಸಂದೇಹ ಪಡುತ್ತಿರುವಾಗ, **"ಯಾರದು, ಒಳಗೆ? ಬಾಗಿಲು ತೆಗೆಯಿರಿ" ಅಧಿಕಾರವಾಣಿ, ಮುದುಕಿಯ ಸಂದೇಹವು ನಿಜವಾಗಿರುವುದು** ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ..

---

**36. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"**

**ಆಯ್ಕೆ :-** ಈ ವಾಕ್ಯವನ್ನು **ಕುಮಾರವ್ಯಾಸ**ನು ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :-** ಕೃಷನ್ಣು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡುತ್ತಾ, ಕುಂತಿ ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಂತರ ಧರ್ಮರಾಯ, ಭೀಮ ಮತ್ತು ಅರ್ಜುನರು ಜನಿಸಿದರು. ಕೊನೆಯ ಮಂತ್ರದಿಂದ ನಕುಲ-ಸಹದೇವರು ಎಂದು ಕೃಷ್ಣನು ಕರ್ಣನಿಗೆ ಹೇಳುವ ಸಂದರ್ಭದಲ್ಲಿ ಈ ಮಾತು ಮೂಡಿ ಬಂದಿದೆ..

**ಸ್ವಾರಸ್ಯ :-** **ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ಕರ್ಣನಿಗೆ ಜನ್ಮರಹಸ್ಯವನ್ನು ಹೇಳುವುದು** ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**37. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."**

**ಆಯ್ಕೆ :-** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆಱಿಪೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :-** ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ?" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :-** "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ" ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ 'ಸಂಧಿ ಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ' ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

---

**38. "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ"**

**ಆಯ್ಕೆ:-**ಈ ವಾಕ್ಯವನ್ನು ಕವಿ 'ಲಕ್ಷ್ಮೀಶನು' ರಚಿಸಿರುವ 'ಜೈಮಿನಿ ಭಾರತ' ಮಹಾಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:-** ಶ್ರೀರಾಮನ ಯಜ್ಞದ ಕುದುರೆಯು ದೇಶದೇಶವನ್ನೆಲ್ಲಾ ಸಂಚರಿಸುತ್ತಾ, ವಾಲ್ಮೀಕಿ ಮುನಿಗಳ ಆಶ್ರಮವನ್ನು ಪ್ರವೇಶಿಸಿತು. ಅದನ್ನು ನೋಡಿದ ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹತ್ತಿರ ಹೋಗಿ, ಅದರ ಹಣೆಯಲ್ಲಿದ್ದ ರಾಜ ಬರೆಹವನ್ನು ಓದುವ ಸಂದರ್ಭದಲ್ಲಿ ಈ ಮಾತು ಮೂಡಿ ಬಂದಿದೆ.

**ಸ್ವಾರಸ್ಯ :-** ಶ್ರೀರಾಮನ ಯಜ್ಞದ ಕುದುರೆಯ ಹಣೆಯ ಮೇಲಿರುವ ರಾಜಬರೆಹದಲ್ಲಿರುವ ಶ್ರೀರಾಮನ ಶ್ರೇಷ್ಠತೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

---

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

39.

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ.
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ?

**ಅಥವಾ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ?

---

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

40.

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಪ್ರಸ್ತುತ ಪದ್ಯಭಾಗವನ್ನು 'ದತ್ತಾತ್ರೇಯ ರಾಮಚಂದ್ರ ಬೇಂದ್ರೆ' ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. 'ಕಾಲ'ವನ್ನು ಹಕ್ಕಿಗೆ ಹೋಲಿಸಿ ರಚಿಸಿರುವ ಈ ಕವಿತೆಯಲ್ಲಿ ಚಲನಶೀಲತೆಯನ್ನು ಹೊಂದಿರುವ ಕಾಲವು ಜೀವಂತಿಕೆಯ ಸ್ವರೂಪದಾಗಿದ್ದು,ಹೊಸತನದ ಸಂಕೇತವಾಗಿದೆ.

ಬೇಂದ್ರೆಯವರು ಈ ಪದ್ಯದಲ್ಲಿ ಶುಕ್ರ, ಚಂದ್ರ, ಮಂಗಳಲೋಕ ಸಂಚಾರ ಕಾಲದ ಭೌತಿಕ ಲಕ್ಷಣವನ್ನು ವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಇನ್ನೊಂದು ಕಡೆ ಬ್ರಿಟೀಷರ ಸಾಮ್ರಾಜ್ಯಶಾಹಿ ನೀತಿಯಿಂದ ಪಾರಾಗುವ ಸ್ವಾತಂತ್ರ್ಯ ಚಿಂತನದ ಕಲ್ಪನಾ ಪಕ್ಷಿಯ ಹಾರಾಟ ಇನ್ನೊಂದು ಲಕ್ಷಣ. ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವನ್ನು ಹಳ್ಳಿಗೆ ಹೋಲಿಸಿ, ಕಾಲದ ಹಕ್ಕಿ ಆ ಹಳ್ಳಿಯ (ಶುಕ್ರಗ್ರಹದ) ಮೇರೆಯನ್ನು ದಾಟಿ ಹಾರಿಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಹಕ್ಕಿ(ಇಲ್ಲಿ

ಭೌತಿಕವಾಗಿ ಮಾನವ ರೂಪದ ಕಾಲ) ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ. ಹಾಗೆಯೇ ಮುಂದೆ ಹಾರಾಡುತ್ತ ಹಾರಾಡುತ್ತ ಮಂಗಳ ಲೋಕ(ಗ್ರಹ)ದ ಅಂಗಳಕ್ಕೆ ಏರಿ ಹೋಗುತಿದೆ.ಹೀಗೆ ವೈಜ್ಞಾನಿಕ ರೆಕ್ಕೆಗಳನ್ನು ಹೊಂದಿದ ಹಕ್ಕಿ ಹಾರುತಿದೆ ನೋಡಿದಿರಾ ಎಂದು ಹಾಡಿದ್ದಾರೆ. **ವೈಜ್ಞಾನಿಕವಾಗಿ ಭಾರತೀಯರು ಚಂದ್ರ, ಶುಕ್ರ, ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಪರೋಕ್ಷವಾಗಿ** ಅಭಿವ್ಯಕ್ತಪಡಿಸಿದ್ದಾರೆ.

---

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8**

**41. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಧರ್ಮಾಧಿಕರಣರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿರಿ?**

ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಎಂಬ ಇಬ್ಬರು ವ್ಯಾಪಾರಿಗಳು, ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಹೆಚ್ಚಾದ ಹೊನ್ನನ್ನು ಪಡೆದು ಹಿಂದಿರುಗಿ ಬಂದು ತಮ್ಮ ಜನ್ಮಭೂಮಿಯಾದ ಮಧುರಾ ಪಟ್ಟಣದ ***ಹೊರಗಿನ ಉದ್ಯಾನವನದಲ್ಲಿ*** ಬೀಡನ್ನು ಬಿಟ್ಟರು. ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು ಹೊನ್ನನ್ನು ಹಂಚಿಕೊಳ್ಳಣವೆನ್ನಲು ದುಷ್ಟಬುದ್ಧಿಯು ಪಾಪ ಬುದ್ಧಿಯಾಗಲು ಯೋಚಿಸಿ ಹೀಗೆಂದನು : ನಾವು ಈ **ಹೊನ್ನನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ** ಮತ್ತೆ ವ್ಯಾಪಾರಕ್ಕೆ ಹೋಗಬೇಕು. ಆ ಕಾರಣದಿಂದ ನಿನಗೆ ನನಗೆ **ಖರ್ಚಿಗೆ ಬೇಕಾದಷ್ಟು ಹೊನ್ನನು** ತೆಗೆದುಕೊಂಡು ಉಳಿದ ಹೊನ್ನನ್ನೆಲ್ಲಾ ಇಲ್ಲಿಯೇ ಮಡಗೋಣವೆನ್ನಲು; ಧರ್ಮಬುದ್ಧಿಯು ಆ ಪಾಪಕರ್ಮನನ್ನು ತನ್ನ ಅಂತರಂಗದ ಸ್ನೇಹಿತನೆಂದೆ ಬಗೆದು, ಅದಕ್ಕೆ ಒಪ್ಪಿಕೊಂಡು ***ಒಂದು ದೊಡ್ಡ ಆಲದ ಮರದ ಪಕ್ಕದಲ್ಲಿ*** ಹೊನ್ನನ್ನು ಹೂಳಿ ಮರುದಿವಸ ಇಬ್ಬರೂ ಪಟ್ಟಣಕ್ಕೆ ಹೋಗಿ ಇಷ್ಟ ವಿಷಯ ಕಾಮ ಭೋಗಗಳನ್ನು ಅನುಭವಿಸುತ್ತಾ ಇದ್ದರು.

ದುಷ್ಟಬುದ್ಧಿಯು, ಧರ್ಮಬುದ್ಧಿಯನ್ನು ವಂಚಿಸಿ ಹೋಗಿ **ಹೊನ್ನೆಲ್ಲವನ್ನೂ ತೆಗೆದುಕೊಂಡು** ಗುಂಡಿಯನ್ನು ಮೊದಲಿನಂತೆ ಮುಚ್ಚಿ ಸ್ವಲ್ಪ ದಿನಗಳ ನಂತರ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ***'ಖರ್ಚಿಗೆ ಹಣವಿಲ್ಲ ಇನ್ನೂ ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಬರೋಣ ಬನ್ನಿ'*** ಎಂದು ಜೊತೆಯಲ್ಲಿ ಹೋಗಿ ಹೂಳಿದ್ದ ಜಾಗದಲ್ಲಿ ಹೊನ್ನನ್ನು ಕಾಣದೆ ,ಇನ್ನೂ ಮಾತನಾಡದೆ ಇದ್ದರೆ ಸುಳ್ಳು ತನ್ನ ಮೇಲೆ ಬರುವುದೆಂದು, **'ಹೊನ್ನನೆಲ್ಲಾ ನೀನೇ ತೆಗೆದುಕೊಂಡಿದ್ದೀಯ'** ಎಂದು, *ದುಷ್ಟಬುದ್ಧಿಯು ಹಣದ ಮೇಲಿನ ಆಸೆಯಿಂದ ಬುದ್ಧಿಗೆಟ್ಟು* ***'ಕಳ್ಳನಿಗೆ ಸುಳ್ಳು ಹೇಳುವುದೇ ಬಲ'****ಎಂಬ ವಾಕ್ಯವನ್ನು ನೆನೆದು ಸುಳ್ಳನ್ನು ಹೇಳಿದನು.*

ಹೀಗೆ ದುಷ್ಟಬುದ್ಧಿಯು ಮೊದಲೇ ಹಾ! ಹಾ! ಕೆಟ್ಟೆನೆಂದು ಬಾಯನ್ನೂ,ಹೊಟ್ಟೆಯನ್ನೂ ಬಡಿದುಕೊಂಡು ಕೂಗಾಡಿ ಧರ್ಮಬುದ್ಧಿಯ ಮೇಲೆ ಕಳ್ಳತನವನ್ನು ಆರೋಪಿಸಿ ಕಾಪಾಡುವವರಿಲ್ಲವೆಂದು ಆತುರದಿಂದ, ತಮ್ಮಲ್ಲಿಯ **ಸ್ನೇಹವೂ ಕೆಡುವಂತೆ ಮಾತನಾಡಿ** ನೀನು ಗೆಲ್ಲಬೇಕೆಂದು ಬಾಯಿ ಮಾಡಿ ಹೋಗಬೇಕೆಂದಿರಲು; ವಿಚಾರ ಮಾಡೋಣವೆಂದು **ತಮ್ಮ ನ್ಯಾಯವನ್ನು ಪರಿಹರಿಸಿಕೊಳ್ಳಲು,** ಧರ್ಮಾಧಿಕಾರಿಗಳ ಬಳಿಗೆ ಬಂದರು.

**ಅಥವಾ**

➢ **ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು** ತಿಳಿಸಿ.

ದುಷ್ಟಬುದ್ಧಿಯು ಧರ್ಮಬುದ್ಧಿಯೊಡನೆ ಸೇರಿ ವ್ಯಾಪಾರ ಮಾಡಿ, ಲಾಭ ಗಳಿಸಿದ್ದ ಹೊನ್ನನು ತಾನೇ ದೋಚಿ, ಕಳ್ಳತನವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿ, ಇದಕ್ಕೆ **ವಟವೃಕ್ಷವೇ ಸಾಕ್ಷಿ** ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಇದರಿಂದ ಧರ್ಮಬುದ್ಧಿ ಮತ್ತು ಧರ್ಮಾಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ. ದುಷ್ಟಬುದ್ಧಿಯು ತಂದೆಯ ಬುದ್ಧಿ ಮಾತನ್ನು ಆಲಿಸದೇ, ಮರದಿಂದ ಸಾಕ್ಷಿ ಹೇಳಿಸಲು **ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ,** ಅವನಿಂದ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಸುಳ್ಳು ಹೇಳಿಸುತ್ತಾನೆ.

ಧರ್ಮಬುದ್ಧಿಯು ದೈವ ಭಕ್ತನಾಗಿದ್ದು ಸತ್ಯ ಹೊರ ಬರುತ್ತದೆ ಎಂದು ನಂಬಿದ್ದನು. ಅವನ ನಂಬಿಕೆಯು ಸುಳ್ಳಾದಾಗ ಮರದ ಬಳಿ ಪರೀಕ್ಷಿಸಿ **ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ.** ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯ ಮನೋಭಾವದಂತೆ ಸುಳ್ಳು ಹೇಳಿದ್ದಾಗಿ, ಚಿನ್ನವನ್ನು ತಾನೇ ತೆಗೆದುಕೊಂಡುದ್ದಾಗಿ ತಿಳಿಸಿ, ಈಗ ಆ ಚಿನ್ನಕ್ಕೆ ಹಾವು ಸುತ್ತುಕೊಂಡಿದೆ ಎಂದು ಹೇಳಿ, ಚಿನ್ನವನ್ನು ತೆಗೆಯಲು ಮರದ **ಪೊಟರೆಗೆ ಹುಲ್ಲುಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ.** ಪೊಟರೆಗೆ ಹೊಗೆ ತುಂಬಿ **ದುಷ್ಟಬುದ್ಧಿಯ ತಂದೆ ಪೇಮಮತಿ ಉಸಿರುಗಟ್ಟಿ ಕೂಗಾಡುತ್ತ** ಪೊಟರೆಯಿಂದ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾಯಿತು.

---

**42. ಹಲಗಲಿ ದಂಗೆಗೆ ಕಾರಣವೇನು? ಕುಂಪಣಿ ಸರಕಾರ ದಂಗೆಯನ್ನು ನಿಯಂತ್ರಿಸಿದ ಬಗೆಯನ್ನು ವಿವರಿಸಿ.**

1857ರ ಸಿಪಾಯಿದಂಗೆ ಅಥವಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದರು. ಅದರ ಪ್ರಕಾರ "ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೆಕಿತ್ತು. ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು. ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ರಾಮ, ಜಡಗರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು. ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಮನವೊಲಿಸಲು ಬಂದ ಹೆಬಲಕ ಎಂಬ ಅಧಿಕಾರಿಯನ್ನು ಕೊಂದರು.

ಇದರಿಂದ ಕಾರ ಸಾಹೇಬನು ಊರನ್ನು ಲೂಟಿಮಾಡುವಂತೆ ಸೈನ್ಯಕ್ಕೆ ಆಜ್ಞಾಪಿಸುತ್ತಾನೆ. ಸೈನಿಕರು ಕೋಪದಿಂದ ಸಿಡಿಲು ಸಿಡಿದಂತೆ ಯಥೇಚ್ಛವಾಗಿ ಗುಂಡಿನ ಮಳೆಗರೆಯುತ್ತಾರೆ. ಬೇಡರನ್ನು ಕಂಡಕಂಡಲ್ಲಿ ಗುಂಡು ಹಾರಿಸಿ ಸಾಯಿಸಿದರು. ಬೇಡರ ಮುಖಂಡರಾದ ಹನುಮ, ಬಾಲ, ರಾ, ಜಡಗರನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸಲಾಯಿತು. ಹಲಗಲಿ ಊರನ್ನು ಲೂಟಿಮಾಡಿ ಬೆಂಕಿಹಚ್ಚಲಾಯಿತು. ಹೀಗೆ ಹಲಗಲಿ ದಂಗೆಯನ್ನು ನಿಯಂತ್ರಿಸಿತು.

ಅಥವಾ

➢ **ಹಲಗಲಿ ಮೇಲೆ ದಂಡು ಹೇಗೆ ದಾಳಿ ಮಾಡಿತು? ದಂಗೆಯ ಪರಿಣಾಮಗಳೇನು?**

1857ರ ಸಿಪಾಯಿದಂಗೆ ಅಥವಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದರು. ಅದರ ಪ್ರಕಾರ "ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೆಕಿತ್ತು. ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು. ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ರಾಮ, ಜಡಗರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು. ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಮನವೊಲಿಸಲು ಬಂದ ಹೆಬಲಕ ಎಂಬ ಅಧಿಕಾರಿಯನ್ನು ಕೊಂದರು.

ಇದರಿಂದ ಕೋಪಗೊಂಡ ಕಾರ ಸಾಹೇಬನು ಊರನ್ನು ಲೂಟಿಮಾಡುವಂತೆ ಸೈನ್ಯಕ್ಕೆ ಆಜ್ಞಾಪಿಸುತ್ತಾನೆ. ಸೈನಿಕರು ಕೋಪದಿಂದ ಸಿಡಿಲು ಸಿಡಿದಂತೆ ಯಥೇಚ್ಛವಾಗಿ ಗುಂಡಿನ ಮಳೆಗರೆಯುತ್ತಾ, ಬೇಡರನ್ನು ಹಾಗೂ ಬೇಡರ ಮುಖಂಡರಾದ ಹನುಮ, ಬಾಲ, ರಾ, ಜಡಗರನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸಿದರು. ಹಲಗಲಿಯ ವೀರ ಬಂಟರೆಲ್ಲರು ಸತ್ತು ಹೋದ ಮೇಲೆ ಬ್ರಿಟಿಷ್ ಸೈನಿಕರು ಕೊಡಲಿ, ಕೋರೆ, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ಬಿಂದಿಗೆ, ಮಂಗಳ ಸೂತ್ರ, ಬೀಸುವ ಕಲ್ಲು ಮೊದಲಾದ ಪದಾರ್ಥಗಳನ್ನು ಲೂಟಿ ಮಾಡಿದರು. ಹಾಗೂ ಇಡೀ ಹಲಗಲಿ ಊರಿಗೇ ಬೆಂಕಿ ಇಟ್ಟು, ಗುರುತೇ ಸಿಗದಂತೆ ಬೂದಿ ಮಾಡಿದರು.

---

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

43.ಅ) ಇಂದು ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳಾವುವು?

❖ ಸಣ್ಣ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಈ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಆದರೆ ಇಂದು ಕೃಷಿಕರ ಗತಿ ಏನಾಗಿದೆ ? ಅವನು ಒಂದೆಡೆ ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮತ್ತೊಂದೆಡೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಕೃಷಿಕ ಹೋರಾಟ ನಡೆಸಬೇಕಾಗಿದೆ.

ಆ) ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎನ್ನಲು ಕಾರಣವೇನು ?

❖ 'ಒಕ್ಕಲಿಗ ಒಕ್ಕದಿರೆ, ಜಗವೆಲ್ಲ ಬಿಕ್ಕುವುದು' ಎನ್ನುವ ಮಾತಿದೆ ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ಹಾಗಾಗಿ ಸರ್ವಜ್ಞ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹ.

---

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

**44**. ನಿಮ್ಮನ್ನು ಹಂಪಾಪುರದ ನಿವಾಸಿ **'ಪೂರ್ಣ'** ಎಂದು ಭಾವಿಸಿಕೊಂಡು, ಮೈಸೂರಿನ **'ಕೃಷ್ಣರಾಜೇಂದ್ರ ಮೃಗಾಲಯ'**ದ ಭೇಟಿಗೆ ಸಮಯಾವಕಾಶವನ್ನು ಕೋರಿ ಮೃಗಾಲಯದ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

**ಸ್ಥಳ :** ಹಂಪಾಪುರ
**ದಿನಾಂಕ :** 26.02.2024

**ರವರಿಂದ,**
ಪೂರ್ಣ
ಜನತಾ ಕಾಲೋನಿ
ಹಂಪಾಪುರ

**ರವರಿಗೆ,**
ಮಾನ್ಯ ವ್ಯವಸ್ಥಾಪಕರು
ಕೃಷ್ಣರಾಜೇಂದ್ರ ಮೃಗಾಲಯ
ಮೈಸೂರು–581421

**ಮಾನ್ಯರೇ,**

**ವಿಷಯ** : 'ಕೃಷ್ಣರಾಜೇಂದ್ರ ಮೃಗಾಲಯ'ದ ಭೇಟಿಗೆ ಸಮಯಾವಕಾಶವನ್ನು ಕೋರಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ– ಪೂರ್ಣ ಎಂಬ ನಾನು ಹಂಪಾಪುರದ ಜನತಾ ಕಾಲೋನಿಯ ನಿವಾಸಿಯಾಗಿದ್ದು, ನಮ್ಮ ಕಾಲೋನಿಯಿಂದ ಮುಂದಿನ ವಾರ ಸುಮಾರು 50 ಜನರು ಪ್ರವಾಸವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಈ ಸಮಯದಲ್ಲಿ ಬೆಂಗಳೂರು, ಕೊಡಗು, ಮೈಸೂರು ಸುತ್ತಮುತ್ತಲಿನ ಸ್ಥಳಗಳ ಪ್ರವಾಸಕ್ಕೆ ಬರುತ್ತಿದ್ದೇವೆ. ನಮಗೆಲ್ಲ ಕೃಷ್ಣರಾಜೇಂದ್ರ ಮೃಗಾಲಯಕ್ಕೆ ಬರುವ ಆಸೆಯಿದ್ದು, ಮೃಗಾಲಯದ ಎಲ್ಲ ಪ್ರಾಣಿಗಳನ್ನು ನೋಡಬೇಕಾಗುವ ಸಮಯ ಮತ್ತು ಭೇಟಿ ಮಾಡಲು ಬೇಕಾದ ಸೂಕ್ತವಾದ ಸಮಯವನ್ನು ತಿಳಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ
*ಪೂರ್ಣ*

**ರವರಿಗೆ,**
ಮಾನ್ಯ ವ್ಯವಸ್ಥಾಪಕರು
ಕೃಷ್ಣರಾಜೇಂದ್ರ ಮೃಗಾಲಯ
ಮೈಸೂರು–581421

***ಅಥವಾ***

- ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ರಜನಿ' ಎಂದು ಭಾವಿಸಿಕೊಂಡು, 'ವಿದ್ಯಾಭ್ಯಾಸದ ಪ್ರಗತಿ'ಯನ್ನು ಕುರಿತು ಬಳ್ಳಾರಿಯ ನಿವಾಸಿಯಾದ 'ರತ್ನಮ್ಮ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು ಬರೆಯಿರಿ.

**ಕ್ಷೇಮ,**

**ರವರಿಂದ,**
ರಜನಿ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ ರಾಯಚೂರು
04.03.2024

**ಪೂಜ್ಯ ಮಾತೃಶ್ರೀಯವರಿಗೆ,**

ನಿಮ್ಮ ಮಗಳಾದ ರಜನಿ ಮಾಡುವ ಶಿರಸಾಷ್ಟಾಂಗ ದೀರ್ಘದಂಡ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀವು ಸಹ ಆರೋಗ್ಯವಾಗಿರುವಿರೆಂದು ತಿಳಿದುಕೊಂಡಿದ್ದೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ–ಈಗಾಗಲೇ ನಾನು 10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವುದು ನಿಮಗೆ ಗೊತ್ತಿರುವ ವಿಷಯವಾಗಿದೆ. ಈ ವರ್ಷದ ಪ್ರಾರಂಭದಿಂದ ಉತ್ತಮ ಅಂಕಗಳನ್ನು ಪಡೆಯಲು ಅಗತ್ಯ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಈ ಹಿಂದೆ ನಡೆದ ಎಲ್ಲಾ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಬಂದಿದ್ದು, ಕೆಲವೊಂದು ವಿಷಯಗಳಲ್ಲಿ ಕಡಿಮೆ ಅಂಕ ಬಂದಿದ್ದು, ಶಿಕ್ಷಕರ ಸಲಹೆ ಮತ್ತು ಸ್ನೇಹಿತರೊಂದಿಗೆ ಚರ್ಚೆ ಮಾಡಿ, ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಂಡು ಉತ್ತಮವಾಗಿ ಅಭ್ಯಾಸಮಾಡುತ್ತಿದ್ದೇನೆ. ಸಾಧ್ಯವಾದರೆ ನೀನು ಮತ್ತು ಅಪ್ಪ ಒಮ್ಮೆ ಶಾಲೆ ಕಡೆಗೆ ಬಂದು ಹೋಗಿರಿ. ನಿಮ್ಮ ಆಶೀರ್ವಾದವನ್ನು ಬೇಡುತ್ತಾ.........

**ನಮಸ್ಕಾರಗಳೊಂದಿಗೆ,**

ಇತಿ ತಮ್ಮ ಪ್ರೀತಿಯ ಮಗಳು
*ರಜನಿ*

**ರವರಿಗೆ,**
ರತ್ನಮ್ಮ
ಕೃಷ್ಣದೇವರಾಯ ನಗರ ಬಳ್ಳಾರಿ–581001

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1x5=5**

**45. ಸಾವಯವ ಕೃಷಿಯ ಮಹತ್ವ :–**

**ಪೀಠಿಕೆ:–**

ಸಾವಯವ ಎಂದರೆ ಕೊಳೆಯಬಹುದಾದ ವಸ್ತುಗಳು . ಅಂದರೆ ನಾವು ಯಾವುದಾದರೊಂದು ವಸ್ತುವನ್ನು ಭೂಮಿಗೆ ಎಸೆದಾಗ ಅದು ಕೆಲವು ದಿನದಲ್ಲಿ ಮಣ್ಣಿನೊಂದಿಗೆ ಬೆರೆತು ಗೊಬ್ಬರವಾಗುತ್ತದೆ. ಉದಾಹರಣೆಗೆ ಸಸ್ಯಗಳ ಅವಶೇಷಗಳು , ಪ್ರಾಣಿಗಳು ಅವಶೇಷಗಳು, ಬಟ್ಟೆ, ಕಾಗದ,ಕಬ್ಬಿಣ ಮೊದಲಾದವು, ಇವು ಭೂಮಿಯಲ್ಲಿ ಕೊಳೆತಾಗ ಮಣ್ಣಿನ ಭಾಗವೇ ಅಗುತ್ತದೆ. ಆ ಮಣ್ಣಿಗೆ ಹೆಚ್ಚಿ ಫಲವತ್ತತೆ ತಂದುಕೊಡುತ್ತದೆ.

**ವಿಷಯ ನಿರೂಪಣೆ:–**




ಸಾವಯವ ಕೃಷಿಯು ಒಂದು ತಂತ್ರವಾಗಿದ್ದು, ಇದರಲ್ಲಿ ಗಾಳಿ, ನೀರು ಮತ್ತು ಮಣ್ಣಿನಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಸುಸ್ಥಿರ ವಿಧಾನದ ಮೂಲಕ ಭೂಮಿಯ ಕೃಷಿ ನಡೆಯುತ್ತದೆ. ಆಧುನಿಕ ಬೇಸಾಯ ಪದ್ಧತಿಯಲ್ಲಿ ಸಾವಯವ ಕೃಷಿಗೆ ಇತ್ತೀಚೆಗೆ ಹೆಚ್ಚಿನ ಆದ್ಯತೆ ದೊರೆಯುತ್ತಿದೆ. ಪ್ರಾಣಿಗಳ ಮಲಮೂತ್ರ, ತರಕಾರಿ ಸಸ್ಯಗಳ ತ್ಯಾಜ್ಯ ಮೊದಲದ ವಸ್ತುಗಳನ್ನು ಅದಕ್ಕಾಗಿಯೇ ಸಿದ್ಧಪಡಿಸಿದ ತೊಟ್ಟಿಗಳಲ್ಲಿ ವೈಜ್ಞಾನಿಕವಾಗಿ ಸಂಗ್ರಹಿಸಿ , ಯಾವುದೇ ಬಗೆಯ ರಾಸಾಯನಿಕ ಪದಾರ್ಥಗಳನ್ನು ಸೇರಿಸದೆ ನೈಸರ್ಗಿಕವಾಗಿ ಕೊಳೆತ ಗೊಬ್ಬರ ತಯಾರಿಸುವುದು. ಆಮೇಲೆ ಅದನ್ನು ಶುದ್ಧಿಗೊಳಿಸಿ ಬೆಳೆಗಳಿಗೆ ನೇರವಾಗಿ ನೀಡುವುದು.ಇಂತಹ ಗೊಬ್ಬರವನ್ನು ವ್ಯವಸಾಯದಲ್ಲಿ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ.

ನೀರನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಅಲ್ಲದೇ ಸಾಮಾನ್ಯ ಕೀಟಬಾಧೆಗಳಿಗೆ ಬೆಳೆ ಬೇಗ ಹಾನಿಯಾಗುವುದಿಲ್ಲ. ಕೀಟ ಬಾಧೆಗಳಿಗೆ ಸಾವಯವ ಪದ್ಧತಿಯಲ್ಲಿ ಬೇವಿನ ಹಿಂಡಿ,ಹೊಂಗೆ ಹಿಂಡಿ ಮೊದಲಾದ ಔಷಧೋಪಚಾರಗಳಿವೆ. ಇವು ರೋಗಗಳನ್ನು ನಿವಾರಿಸುವುದಲ್ಲದೇ ,ಅಲ್ಲಿ ಉತ್ಪನ್ನವಾದ ತರಕಾರಿ, ಹಣ್ಣು, ಬೆಳೆಗಳನ್ನು ಸೇವಿಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮಗಳಾಗುವುದಿಲ್ಲ.

**ಉಪಸಂಹಾರ :–**

ಒಟ್ಟಿನಲ್ಲಿ ಸಾವಯವ ಕೃಷಿ ಪದ್ಧತಿಯು ಇಂದಿನ ಆಧುನಿಕ ಯುಗದಲ್ಲಿ ಹೆಚ್ಚು ಉಪಯೋಗಕಾರಿಯಾದುದು. ಇದರಿಂದ ಬೆಳೆಗಳಿಗೆ ಆಧುನಿಕ ರಾಸಾಯನಿಕ ಔಷಧಗಳ ಬಳಕೆಯನ್ನು ಕಡಿಮೆ ಮಾಡಿ,ಅದರಿಂದುಂಟಾಗುವ ದುಷ್ಪರಿಣಾಮಗಳನ್ನು ತಡೆಯಬಹುದು.ಹಾಗಾಗಿ ಇಂದಿನ ದಿನಗಳಲ್ಲಿ ಸಾವಯವ ಕೃಷಿ ಪದ್ಧತಿ ರೈತಮಿತ್ರ ಪದ್ಧತಿ ಮತ್ತು ಪರಿಸರ ಸ್ನೇಹಿ ಕೃಷಿ ಪದ್ದತಿ ಎನ್ನಿಸಿದೆ.

**ಅಥವಾ**

## ➢ ರಾಷ್ಟ್ರೀಯ ಭಾವೈಕ್ಯ :-

**ಪೀಠಿಕೆ:-**

ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ "ವಿವಿಧ ಭಾಷೆ, ಸಂಸ್ಕೃತಿ, ಧರ್ಮ , ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೋದಿರುವುದೇ 'ರಾಷ್ಟ್ರೀಯ ಭಾವೈಕ್ಯತೆ". ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ,ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

**ವಿಷಯ ನಿರೂಪಣೆ:-**




ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊದಿಂದ್ದು, ದೇಶದ ಯಾವುದೇ ಮೂಲೆಗೆ ಹೋದರು ಅಲ್ಲಿ ವೈವಿದ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಚಲಿಸುತ್ತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ, ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಬಲವಾದ ಬೇರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಲಾಂಛನ, ರಾಷ್ಟ್ರಭಾಷೆ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ 'ವಂದೇಮಾತರಂ, ಸಾರೇ ಜಹಾಸೇ ಅಚ್ಚಾ, ಜನಗಣಮನ ಅಧಿನಾಯಕ' ದಂತಹ ದೇಶ ಭಕ್ತಿಗೀತೆಗಳು ನಮ್ಮಲ್ಲಿ ದೇಶಪ್ರೇಮ, ದೇಶಾಭಿಮಾನವನ್ನು ಹುಟ್ಟಿಸುತ್ತವೆ. ಇಡೀ ದೇಶವೇ ವೈವಿಧ್ಯಮಯವದ ಸಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿ ಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

'ವಸುಧೈವ ಕುಟುಂಬಕಂ' 'ಸರ್ವೇ ಜನಾಃ ಸುಖಿನೋ ಭವಂತು' ಎಂಬುದು ಭಾರತೀಯ ಸಂಸ್ಕೃತಿ. ಪ್ರಾಚೀನ ಕಾಲದಿಂದಲೂ ಸಹಬಾಳ್ವೆ ಸಹಿಷ್ಣುತೆಯನ್ನು ಭಾರತವು ಬೋಧಿಸುತ್ತಾ ಪಾಲಿಸುತ್ತಾ ಬಂದಿದೆ. ಭಾರತ ಸರ್ವಜನಾಂಗದ ಶಾಂತಿಯ ಬೀಡು. ವಿವಿಧತೆಯಲ್ಲಿ ಏಕತೆಯೇ ದೇಶದ ಶಕ್ತಿ. ಹಲವು ಧರ್ಮ, ಜಾತಿ, ಭಾಷೆ, ಪ್ರಾಂತ್ಯ, ಸಂಸ್ಕೃತಿಗಳನ್ನು ಹೊಂದಿದೆ. ಕೆಲವೊಮ್ಮೆ ಈ ವೈವಿಧ್ಯತೆಯ ಕಾರಣದಿಂದ ದೇಶದ ಶಾಂತಿ ಹಾಳಾಗುವುದುಂಟು. ಆದರೆ ನಮ್ಮ ಭಾವೈಕ್ಯತೆ ಬಲಿಷ್ಠವಾಗಿದ್ದರಿಂದ ಈ ಅಸಹಿಸ್ಣುತೆ, ಹಿಂಸೆ, ದ್ವೇಷಗಳ ಮೇಲೆ ವಿಜಯ ಸಾಧಿಸುತ್ತ ಬಂದಿದ್ದೇವೆ.

ಸಂವಿಧಾನ ಮತ್ತು ಕಾನೂನನ್ನು ಪಾಲಿಸುವುದು. ಪ್ರಜೆಗಳು ಹಕ್ಕು ಕರ್ತವ್ಯಗಳಿಗೆ ಬದ್ಧರಾಗಿರುವುದು. ದೇಶಸೇವೆಗೆ ಸದಾ ಸಿದ್ಧವಾಗಿರುವುದು. ಯುದ್ಧ, ಭೂಕಂಪ, ಪ್ರವಾಹಗಳಂತಹ ಆಪತ್ಕಾಲದಲ್ಲಿ ನೆರವಾಗುವುದು. ರಾಷ್ಟ್ರೀಯ ಸ್ಮಾರಕ ರಕ್ಷಣೆ ಮಾಡುವುದು. ಸಾರ್ವಜನಿಕ ಸ್ಥಳ ಮತ್ತು ಆಸ್ತಿಗಳ ಕಾಪಾಡುವುದು. ಅರಣ್ಯ ರಕ್ಷಣೆ, ಪರಿಸರ ಸ್ವಚ್ಛತೆ, ಪ್ರಜಾಕಲ್ಯಾಣ ಭಾವನೆ ಬೆಳಸಿಕೊಳ್ಳುವುದು.

**ಉಪಸಂಹಾರ :-**

ಇತ್ತೀಚೆಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲವಣೆಯ ಹಂತದಲ್ಲಿದೆ . ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಗಾಳಿಯು ಇಡೀ ವಿಶ್ವವನ್ನೇ ನಡುಗಿಸುತ್ತಿದೆ. ಆದರೆ ಭಾರತೀಯರಾದ ನಾವು ಮಾತ್ರ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ಧತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

**ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ**
**ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ**
**ಒಂದೆ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಲಿನಲ್ಲಿ**
**ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ**
**ಭಾಷೆ ಬೇರೆ ಭಾವವೊಂದು ನಾವು ಭಾರತೀಯರು**